ಪದಬಂಧ




ಎಡದಿಂದ ಬಲಕ್ಕೆ:

1. ಆಶುಕವಿತೆಯ ಪ್ರಭಾವ ಸ್ಥಿರವಾದದ್ದೇನಲ್ಲ ಬಿಡಿ (4)
3. ಭಾರವನ್ನಿಳಿಸಿ ತಿರುಗಿದರೆ ಆಕಾಶದಲ್ಲಿ ಚೂರೂ ಮೋಡ ಇಲ್ಲ (3)
4. ವರುಣನ ಕೃಪೆ ಕುರಿತು ಭಾರೀ ವಿವರಣೆ (3)
6. ಭಾರೀ ವೈಶಾಲ್ಯದ 'ಈಶ್ವರನ ಮನೆ' (4)
8. ವಿಷಕರ ವಸ್ತುಗಳನ್ನೇ ಮಾರಿ ಮಾರಿ ಸಿರಿವಂತನಾದನೇ? (4)
10. ಪದ್ಧತಿಯನ್ನನುಸರಿಸಿದರೆ ಪ್ರತ್ಯಕ್ಷನಾದಾನು ಕುಬೇರ (4)
12. ಕೇಳಲು ಈಗ ಏನಿಲ್ಲ– ಇದು ಸದ್ಯದ ಯುಗ (4)
16 ಆ ಟಾಂಗಾ ಏರಿದರೆ ಚರಂಡಿಯೇ ಗತಿ (3)
17. ಪೂಜೆ ಸಲ್ಲಿಸುವಾಗ ಅದೇ ನಾಮವನ್ನೇ ಮತ್ತೆ ಮತ್ತೆ ಹೇಳು (3)
18. ಎಂಥ ಮೌಢ್ಯ! ಕಂಟಕಕ್ಕೆ ಕಾರಣ ಈ ನಕ್ಷತ್ರ ರಾಶಿಯೇ? (4)

ಮೇಲಿಂದ ಕೆಳಕ್ಕೆ:

1. 'ಕಾಗೆ ಬಂಗಾರ'–ಅದೇನು ಖನಿಜ, ಕೇಳಿದ್ದೀರಾ? (3)
2. ತೇರಿನುತ್ಸವ ನಡೆದಿದ್ದು ಅಮ್ಮನ ಊರಿನಲ್ಲಿ ತಾನೇ? (3)
3. ಮನೆ ಕೆಲಸದಾಕೆಯ ಹೆಸರಲ್ಲಿ ಕಿಂಚಿತ್ತೂ ಕೊಳೆ ಇಲ್ಲ (3)
5. ಊರನ್ನೆಲ್ಲ ನವೀಕರಿಸಲು ಸಹಾಯ ಬೇಕೇ ಬೇಕು (3)
6. ಶೂಲದ ತುದಿಗೆ ಚೂಪು ಕಲ್ಲು–ಪುರಾತನ ಸಾಧನ (4)
7. ಯಾತ್ರಿಕರಿಗೆ ಆತಿಥ್ಯದಲ್ಲಿ ಎಂದಿನಂತಹದೇ ಕ್ರಮ (4)
8. ಸಾರ್ಥಕವಾದ ಕೆಲಸ– ಎಲ್ಲ ಜನರಿಗೂ ಅನ್ವಯ (4)
9. ಮುರುಕು ಮನೆಯಲ್ಲಿದ್ದರೂ ಆಗಿನದು ಸುಂದರ ಸಮಯ (4)
11. ಪುನುಗು ಬೆಕ್ಕಿನ ಎದುರು ಹೆಡೆ ತೆರೆದ ಹಾವು (3)
13. ಲಕ್ಷ್ಯ ವಹಿಸು. ಆ ಮೇಲೆ ಬರೆದಿರಿಸು (3)
14. ಹೀಗೆ ಮೆರೆದಾಡುವ ಕೆಲಸ ತುಂಬ ಹಾನಿಕರ (3)
15. ರುಜು ಹಾಕಲು ಬಂದ ನೋಡಿ, ಅಗಸ (3)

## 27–11–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪತಂಗ; 3. ಪ್ರಮಾದ; 4. ದಕ್ಷತೆ; 6. ಪರಿಣಯ; 7. ಹಗೆತನ; 9. ಕೆಳಗಡೆ; 11. ಕಂಬಸಾಲು; 15. ರಜತ; 16. ಲಡಾಯಿ; 17. ನಡುಕ.

ಮೇಲಿಂದ ಕೆಳಕ್ಕೆ:

1. ಪದಕ; 2. ಗದರು; 3. ಪ್ರವೀಣ; 5. ತೆರಿಗೆ; 6. ಪತಾಕೆ; 8. ನವಿಲು; 10. ಗಮಾರ; 12. ಬಡಾಯಿ; 13. ವೇತನ; 14. ಚಾಲಕ.

## ಪ್ರಶ್ನಾಂಕಣ

# ದಿ ಗ್ರೇಟ್ ರೆಡ್ ಸ್ಪಾಟ್

ಅದು ಗುರುಗ್ರಹದ 'ವಾತಾವರಣ'ದಲ್ಲಿ ಎದ್ದು ಕಾಣುವ ಒಂದು ಪ್ರಧಾನ ಲಕ್ಷಣ. ಹೆಸರೇ ಸೂಚಿಸುವಂತೆ 'ಮಹಾನ್ ವಿಸ್ತಾರದ ಕೆಂಪುಬಣ್ಣದ ಮಚ್ಚೆ'ಯಂತಹ ಲಕ್ಷಣ ಇದು. ಗುರುಗ್ರಹದ ವಾತಾವರಣದಲ್ಲಿ ಸುತ್ತಮುತ್ತಲಿನ ಶೀತಲ ಅನಿಲ ಮೋಡಗಳ ಹರವಿನಿಂದ ಹೊರಕ್ಕೆ ಎಂಟು ಕಿಲೋಮೀಟರ್ ಎತ್ತರಕ್ಕೆ ಉಬ್ಬಿ ಭರದಿಂದ ಸುತ್ತುತ್ತಿರುವ ಪರಮ ದೈತ್ಯ ಪರಮಶಕ್ತ ಪರಮ ಭೀಕರ 'ಚಂಡಮಾರುತ' ಇದಾದರೂ ಧರೆಯ ಚಂಡಮಾರುತಗಳಂತೆ ನೀರಾವಿ ರಾಶಿ ಇದಲ್ಲ. ಇತರ ಕೆಲ ಅನಿಲ ಭರಿತ ಈ ಪರಮ ರುದ್ರ ಸೈಕ್ಲೋನು ಅದರಲ್ಲಿ ಬೆರೆತಿರುವ 'ರಂಜಕ'ದಿಂದಾಗಿ ಕೆಂಪು–ಗುಲಾಬಿ ವರ್ಣಗಳಷ್ಟು ಪಡೆದಿದೆ. ಹಾಗಾಗಿ ಕೆಂಬಣ್ಣದ ಬೃಹತ್ ಮಚ್ಚೆಯಂತೆ ಗೋಚರಿಸುವ ಈ ಗುರು ಅಲಂಕಾರ ಸದ್ಯದಲ್ಲಿ ಇಡೀ ಸೌರವ್ಯೂಹದಲ್ಲೇ ಅಸದೃಶ, ಅತ್ಯದ್ಭುತ (ಚಿತ್ರ 2,3 ರಲ್ಲಿ ಗಮನಿಸಿ)

ಈ ಮಹಾನ್ ಕೆಂಪು ಮಚ್ಚೆಯನ್ನು 'ಸದ್ಯದ ಅಲಂಕಾರ ಎಂದಿದ್ದೇಕೆಂದರೆ ಇದು ಗುರುವಿನ ಶಾಶ್ವತ ಲಕ್ಷಣವಾಗಿ ಉಳಿಯುವಂತಹದಲ್ಲ. ಸೌರವ್ಯೂಹದ (ಚಿತ್ರ–1) ಅತ್ಯಂತ ದೈತ್ಯ ಗ್ರಹವಾಗಿ, ಅತ್ಯಂತ ಹೆಚ್ಚು– ಅರವತ್ತಕ್ಕಿಂತ ಅಧಿಕ–ಚಂದ್ರರಿಂದ ಅಲಂಕರಣಗೊಂಡು ವಿಶಿಷ್ಟ ಸ್ಥಾನದಲ್ಲಿರುವ ಗುರುಗ್ರಹಕ್ಕೆ ಈ ಕೆಂಪು ಮಚ್ಚೆ ಮತ್ತೊಂದು ವಿಶಿಷ್ಟವಾದ ಆದರೆ ತಾತ್ಕಾಲಿಕವಾದ ಲಕ್ಷಣವನ್ನೊದಗಿಸಿದೆ.

ಹಾಗೆಂದು ಗುರುವಿನ ಈ ಚಂಡಮಾರುತ ಭೂ ಚಂಡಮಾರುತಗಳಂತೆ ಅಲ್ಪಾಯುಷಿಯೆಂದು ಭಾವಿಸಿಬಿಡಬೇಡಿ. ಗುರುವಿನ ಕೆಂಪು ಮಚ್ಚೆಯನ್ನು ಬ್ರಿಟಿಷ್ ವಿಜ್ಞಾನಿ 'ರಾಬರ್ಟ್ ಹುಕ್' ಇಸವಿ 1664ರಲ್ಲೇ ವೀಕ್ಷಿಸಿ ದಾಖಲಿಸಿದ್ದರು. ಅದರ ವೈಶಾಲ್ಯದ ಅಳತೆ ಸಾಧ್ಯವಾದದ್ದು ಮಾತ್ರ 1800ನೇ




ಇಸವಿಯ ಸುಮಾರಿಗೆ. ಆಗ ತುಂಬ ದೀರ್ಘ ವೃತ್ತಾಕಾರದಲ್ಲಿದ್ದ ಈ ಮಚ್ಚೆಯ ಪ್ರಧಾನ ವ್ಯಾಸ 41000 ಕಿ.ಮೀ. ಉದ್ದ ಇತ್ತು. ಎಂದರೆ ಮೂರು ಭೂಮಿಗಳನ್ನು ಸಾಲಾಗಿ ಇರಿಸಿದರೂ ಮುಗಿಯದ ಉದ್ದ! ಆದರೆ ಆಶ್ಚರ್ಯ ಏನೆಂದರೆ 1979 ರಲ್ಲಿ 'ವಾಯೇಜರ್' ವ್ಯೋಮನೌಕೆಯ ವೀಕ್ಷಣೆಯ ಪ್ರಕಾರ ಕೆಂಪು ಮಚ್ಚೆಯ ವ್ಯಾಸ 21000 ಕಿ.ಮೀ.ಗೆ ಕುಸಿದಿತ್ತು. ಅದರ ಈಗಿನ ವ್ಯಾಸ 16,500 ಕಿ.ಮೀ. ಅಷ್ಟೇ ಅಲ್ಲದೆ ಕಾಲದಿಂದ ಕಾಲಕ್ಕೆ ಕುಗ್ಗುತ್ತಿರುವುದಷ್ಟೇ ಅಲ್ಲದೆ ಕೆಂಪು ಮಚ್ಚೆ ವೃತ್ತಾಕಾರಕ್ಕೆ ಬದಲಾಗುತ್ತಿದೆ ಕೂಡ. ಖಗೋಳ ವಿಜ್ಞಾನಿಗಳ ಲೆಕ್ಕಾಚಾರಗಳ ಪ್ರಕಾರ ಇನ್ನು ನಾಲ್ಕೈದು ವರ್ಷಗಳ ವೇಳೆಗೆ ಅದು ಸಂಪೂರ್ಣ ವೃತ್ತಾಕಾರ ತಳೆಯಲಿದೆ. ಹಾಗೂ ಅದು ಕುಗ್ಗುತ್ತಿರುವ ವೇಗ ಈಗಿರುವಂತೆಯೇ ಮುಂದುವರೆದರೆ ಇನ್ನು ಎರಡು ದಶಕಗಳಲ್ಲಿ ಈ ಮಚ್ಚೆ ಸಂಪೂರ್ಣ ಕರಗಿಹೋಗಲಿದೆ!

ಗುರುಗ್ರಹದ ಸಮಭಾಜಕದ ದಕ್ಷಿಣಕ್ಕೆ ಮುವ್ವತ್ತು ಡಿಗ್ರಿ ಅಕ್ಷಾಂಶಕ್ಕೆ ಹೊಂದಿದಂತೆ ಸ್ಥಿತಗೊಂಡು ತಾಸಿಗೆ 650 ಕಿ.ಮೀ. ವೇಗದಲ್ಲಿ ಅಪ್ರದಕ್ಷಿಣವಾಗಿ ಸುತ್ತುತ್ತಿರುವ ಈ ವರ್ಣಮಯ ಅಲಂಕಾರ ಗುರುಗ್ರಹದ ಅಶಾಶ್ವತ ಲಕ್ಷಣವಷ್ಟೇ ಎಂಬುದು ಸ್ಪಷ್ಟ ತಾನೇ?

■ ಎನ್. ವಾಸುದೇವ್